ದಿನಾಂಕ 15.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ- **1 ರಿಂದ 4 ನೇ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಎಂ.ಕೆ.ಎಸ್ ರವರಿಂದಃ-**

ಸರ್ವೆ ನಂ.**54/1** ರ ಸ್ವತ್ತನ್ನು ನಾನು **2023** ರಲ್ಲಿ **6** ನೇ ಪ್ರತಿವಾದಿಯಿಂದ ಖರೀದಿಸಿರುತ್ತೇನೆ. ಅದಕ್ಕೂ ಮೊದಲು ಸದರಿ ಸ್ವತ್ತು ನನ್ನ ಸ್ವಾಧೀನದಲ್ಲಿಯೇ ಇತ್ತು. ನಾನು **2000** ನೇ ಇಸವಿಯಿಂದ ಸರ್ವೆ ನಂ. **54/1** ರ ಸ್ವತ್ತಿನ ಸ್ವಾಧೀನದಲ್ಲಿ ಇದ್ದೇನೆ. ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ನಾನು ಪ್ರತಿವಾದಿ **1, 5** ಹಾಗೂ ಮೃತ ಸರೋಜ ಗಣಪತಿರವರಿಂದ ನೋಂದಾಯಿತ ಕರಾರುಪತ್ರವನ್ನು ಮಾಡಿಕೊಂಡಿರಲಿಲ್ಲ. ಸರ್ವೆ ನಂ.**54/1** ರ ಸ್ವತ್ತನ್ನು ಅಭಿವೃದ್ದಿಪಡಿಸಲು ಕರಾರುಪತ್ರವನ್ನು ಮಾಡಿಕೊಂಡಿರಲಿಲ್ಲ. ಸರ್ವೆ ನಂ.**54/1** ರ ಸ್ವತ್ತಿಗೆ ನಿರ್ದಿಷ್ಟ ಪ್ರತಿಫಲದ ಹಣವನ್ನು ನಿಗದಿಪಡಿಸಿರಲಿಲ್ಲ. ಸರ್ವೆ ನಂ.**54/1** ಮತ್ತು ಸರ್ವೆ ನಂ.**54/12**ಪಿ**2** ರ ಸ್ವತ್ತುಗಳನ್ನು ನಿರ್ದಿಷ್ಟ ಮೊತ್ತಕ್ಕೆ ಖರೀದಿಸಲು ಒಪ್ಪಿ, ಕರಾರುಪತ್ರವನ್ನು ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ಮೇಲ್ಕಂಡ ಸ್ವತ್ತುಗಳನ್ನು ಖರೀದಿಸುವುದಕ್ಕೆ ಸಂಬಂಧಿಸಿದಂತೆ **2000**ನೇ ಇಸವಿಯಲ್ಲಿ **1**ನೇ ಪ್ರತಿವಾದಿಯೊಂದಿಗೆ ಮಾತುಕತೆಯಾಗಿತ್ತು. ನಾನು ಓರಿಯೆಂಟಲ್ ಇನ್ಸೂರೆನ್ಸ್ ಕಂಪನಿಯಲ್ಲಿ ಉದ್ಯೋಗದಲ್ಲಿದ್ದೆನು.

ದಿನಾಂಕ **10.08.2001** ರಂದು **1** ನೇ ಪ್ರತಿವಾದಿಯು ನನಗೆ ಮತ್ತು ನನ್ನ ತಮ್ಮನಿಗೆ ಪತ್ರವನ್ನು ನೀಡಿದ್ದು, ಸದರಿ ಪತ್ರಕ್ಕೆ ನಾವುಗಳು ದಿನಾಂಕ **28.08.2001**ರಂದು ಪತ್ರ ಮುಖೇನ ಉತ್ತರಿಸಿರುತ್ತೇವೆ ಎಂದರೆ ಸರಿ. ಸದರಿ ಪತ್ರ ಮತ್ತು ಪ್ರತ್ಯುತ್ತರಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಡಿ-**3** ಮತ್ತು **4** ಎಂದು ಗುರುತಿಸಲಾಯಿತು. ದಿನಾಂಕ

**28.08.2001** ರ ನಂತರ ನಾನು  ಪ್ರತಿವಾದಿ **1, 5** ಮತ್ತು ಅವರ ತಾಯಿಗೆ ವಕೀಲರ ಮೂಲಕ ನೋಟೀಸನ್ನು ನೀಡಿರುವುದಿಲ್ಲ.

**2020** ರಲ್ಲಿ **1** ನೇ ಪ್ರತಿವಾದಿಯು  ತನ್ನ ವಕೀಲರ ಮೂಲಕ ನನಗೆ ನೋಟೀಸನ್ನು ನೀಡಿ, ನಾನು ಸರ್ವೆ ನಂ. **54/1** ಮತ್ತು ಸರ್ವೆ ನಂ.**54/12**ಪಿ**2** ರ ಸ್ವತ್ತುಗಳನ್ನು ಒತ್ತುವರಿ ಮಾಡಿಕೊಂಡು ಸ್ವಾಧೀನದಲ್ಲಿ ಇದ್ದು, ಸದರಿ ಸ್ವಾಧೀನವನ್ನು ಬಿಟ್ಟುಕೊಡುವಂತೆ  ಕೋರಿದ್ದರು ಎಂದರೆ ಸರಿ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.